# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 807 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಯು.ಬಿ ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 20.09.2022 |
| ಉತ್ತರಿಸಬೇಕಾದ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಹೆರಿಗೆ ವೇಳೆ ಸಂಭವಿಸುವ ತಾಯಿ ಮರಣ ಪ್ರಮಾಣದ ರಾಜ್ಯವಾರು ಪಟ್ಟಿಯಲ್ಲಿ ಕರ್ನಾಟಕವು 8ನೇ ಸ್ಥಾನದಲ್ಲಿರುವ ಬಗ್ಗೆ ವರದಿಯಾಗಿದ್ದು, ಈ ಸ್ಥಾನವನ್ನು ಮೊದಲನೇ ಸ್ಥಾನಕ್ಕೆ ಕೊಂಡೊಯ್ಯಲು ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು: | ರಾಜ್ಯವನ್ನು ಉತ್ತಮ ಸ್ಥಾನಕ್ಕೆ ಕೊಂಡೊಯ್ಯಲು ಈ ಕೆಳಗಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ.<br><br>1. ಜನನಿ ಸುರಕ್ಷಾ ಯೋಜನೆ.<br>2. ಸುರಕ್ಷಿತ ಮಾತೃತ್ವ ಆಶ್ವಾಸನೆ<br>3. ಜನನಿ ಶಿಶು ಸುರಕ್ಷಾ ಯೋಜನೆ,<br>4. ಪಿ.ಎಂ.ಎಸ್.ಎಂ.ಎ<br>5. ಪ್ರತ್ಯೇಕ ಎಂ.ಸಿ.ಹೆಚ್ ಆಸ್ಪತ್ರೆಗಳ ಸ್ಥಾಪನೆ.<br>6. ಲಕ್ಷ್ಯ ಕಾರ್ಯಕ್ರಮ.<br>7. ಉಚಿತ ಕಬ್ಬಿಣಾಂಶ ಮತ್ತು ಫೋಲಿಕ್ ಆಸಿಡ್ ಮಾತ್ರೆಗಳು, ಕ್ಯಾಲ್ಸಿಯಂ ಮಾತ್ರೆಗಳು ಮತ್ತು ಆಲ್‌ಬೆಂಡಜೋಲ್ ಮಾತ್ರೆಗಳ ಪೂರೈಕೆ.<br>8. ತಾಯಿ ಮರಣ ಆಡಿಟ್ ಮಾಡಿ ತಡೆಯಬಹುದಾಗಿರುವ ಮರಣಗಳನ್ನು ಮರುಕಳುಹಿಸದಂತೆ ಕ್ರಮ ವಹಿಸಲು ಸೂಚನೆ ನೀಡಲಾಗಿರುತ್ತದೆ.<br><br>ಇಲಾಖೆಯಿಂದ ಕೈಗೊಂಡ ಮಾದರಿ ಕಾರ್ಯಕ್ರಮಗಳು ಕೆಳಕಂಡಂತಿರುತ್ತವೆ.<br><br>1. ಆರು ತಿಂಗಳಿಗೊಮ್ಮೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಕಾರ್ಯನಿರ್ವಹಕ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ತಾಯಿ ಮರಣದ ಬಗ್ಗೆ ಇಲಾಖೆಯು ಪ್ರಸ್ತಾಪಿಸುತ್ತದೆ ಮತ್ತು ಮರಣ ತಡೆಯುವ ಪ್ರಗತಿಯ ಬಗ್ಗೆ ವಿಶ್ಲೇಷಿಸುತ್ತದೆ.<br><br>2. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಕೈಗೊಳ್ಳುವ ವಿಭಾಗೀಯ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ತಾಯಿ ಮರಣ ತಡೆಯುವ ಬಗ್ಗೆ ಜಿಲ್ಲೆಯು ಕೈಗೊಂಡಿರುವ ಕ್ರಮಗಳನ್ನು ವಿಶ್ಲೇಷಣೆ ಮಾಡಲಾಗುತ್ತಿದೆ. |

<table>
<tr><td></td><td></td><td>3. ಕರ್ನಾಟಕ ಸರ್ಕಾರವು ಗುಣಾತ್ಮಕ ಮಾತೃ ಆರೋಗ್ಯ ಪಾಲನೆಗೆ ಒತ್ತುಕೊಟ್ಟು, ಮಾನವ ಸಂಪನ್ಮೂಲವನ್ನು ಮಂಜೂರು ಮಾಡಿರುತ್ತದೆ ಮತ್ತು 247 ಎಫ್.ಆರ್.ಯು ಗಳನ್ನು ಕಾರ್ಯಗತಗೊಳಿಸಲಾಗಿರುತ್ತದೆ. ಎಫ್.ಆರ್.ಯು ಗಳಲ್ಲಿ ಸಮಗ್ರ ಗರ್ಭಿಣಿ, ಪ್ರಸೂತಿ ಆರೈಕೆ ಮತ್ತು ನವಜಾತ ಶಿಶು ಆರೈಕೆಯನ್ನು ನೀಡಲಾಗುತ್ತಿದೆ ಇದರಿಂದ ಗರ್ಭಿಣಿಗೆ ಪ್ರಸೂತಿ ಸಮಯದಲ್ಲಿ ಅವಶ್ಯವಿರುವ ಸಿಸೇರಿಯನ್ ವ್ಯವಸ್ಥೆಯನ್ನು ಸಹ ಒದಗಿಸಲಾಗಿದೆ.<br><br>4. ಇಲಾಖೆಯ ಸೇವಾ ಪೂರೈಕೆದಾರರಾದ ವೈದ್ಯರು, ಶುಶ್ರೂಷಕಿಯರು ಮತ್ತು ಇತರೆ ಸಿಬ್ಬಂದಿಯವರ ತಾಯಿ ಮರಣ ತಡೆಯುವ ಬಗ್ಗೆ ಜಾಗೃತಿಯನ್ನು ಮೂಡಿಸಲಾಗುತ್ತಿದೆ.<br><br>5. ವೈದ್ಯರು ಮತ್ತು ಶುಶ್ರೂಷಕರಿಗೆ ದಕ್ಷತಾ ತರಬೇತಿಯನ್ನು ನೀಡಲಾಗುತ್ತಿದೆ.</td></tr>
<tr><td>ಆ)</td><td>ತಾಯಿ ಮರಣ ಪ್ರಮಾಣ ಇಳಿಕೆ ಸಂಬಂಧ ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಕಳೆದ ಮೂರು ವರ್ಷಗಳಲ್ಲಿ ಒದಗಿಸರುವ ಅನುದಾನವೆಷ್ಟು.</td><td><table><tr><th>Year</th><th>Budget Allocation Rs. In Lakhs</th></tr><tr><td>2019-20</td><td>16495.00</td></tr><tr><td>2020-21</td><td>8179.66</td></tr><tr><td>2021-22</td><td>8739.91</td></tr></table></td></tr>
<tr><td>ಇ)</td><td>ಈ ಅನುದಾವನ್ನು ಯಾವ ರೀತಿಯಲ್ಲಿ ಬಳಕೆ ಮಾಡಲಾಗಿದೆ?</td><td>1. JSY ಅನುದಾನವನ್ನು DBTS ಮೂಲಕ ಫಲಾನುಭವಿಗಳಿಗೆ ನೇರವಾಗಿ ಅವರ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗುತ್ತಿದೆ.<br>2. JSSK ಅನುದಾವನ್ನು ಸರ್ಕಾರಿ ಆಸ್ಪತ್ರೆಗಳಿಗೆ ಬಿಡುಗಡೆ ಮಾಡಲಾಗುತ್ತದೆ. ಈ ಅನುದಾನದಲ್ಲಿ ಎಲ್ಲಾ ಹೆರಿಗೆ ಪ್ರಕರಣಗಳಿಗೆ ಕೆಳಗಿನ 5 ಸೌಲಭ್ಯಗಳನ್ನು ಉಚಿತವಾಗಿ ನೀಡಲಾಗುತ್ತಿದೆ.<br>• ವೈದ್ಯಕೀಯ ತಪಾಸಣೆ ಹಾಗೂ ಹೆರಿಗೆ,<br>• ಪ್ರಯೋಗಾಲಯ ಪರೀಕ್ಷೆಗಳು<br>• ಔಷದೋಪಚಾರಗಳು<br>• ಹೆರಿಗೆ ಸಮಯದಲ್ಲಿ ಊಟದ ವ್ಯವಸ್ಥೆ<br>• ಹೆರಿಗೆ ಸಮಯದಲ್ಲಿ ಮತ್ತು ಹೆರಿಗೆಯ ನಂತರ ಸಾರಿಗೆ ವ್ಯವಸ್ಥೆ.<br>3. ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳ ನಿರ್ಮಾಣ.</td></tr>
</table>

**ಸಂಖ್ಯೆ: ಆಕುಕ 81 ಎಸ್.ಟಿ.ಕ್ಯೂ 2022**

**(ಡಾ|| ಕೆ.ಸುಧಾಕರ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು